ಒಬ್ಬರನ್ನೊಬ್ಬರು ನೋಡುತ್ತ, ಮುಂದೇನು ಮಾಡಬೇಕೆಂದು ತಲೆಬುಡ ತಿಳಿಯದೆ ಮಿಸುಕಾಡುತ್ತಿದ್ದೆವು. ಕುರುಕ್ಷೇತ್ರಕ್ಕೆ ಹೊರಟ ಅರ್ಜುನನನ್ನು ರಥದ ಮೇಲೆ ನಿಲ್ಲಿಸಿಕೊಂಡು ಗೀತೋಪದೇಶ ಮಾಡಿದ ಹಾಗೆ, ಗೋಪಾಲನ್ ನಮ್ಮ ಪರಿವೆಯೇ ಇಲ್ಲದೆ, ಕಣ್ಣುಗಳನ್ನು ಮುಚ್ಚಿಕೊಂಡು ಇದಕ್ಕೆ ವಿವರಣೆ ಕೊಡುತ್ತಿದ್ದರು – 'ಶಂಕರರು ಹೇಳಿದ್ದು ಏನು ಗೊತ್ತಾಯಿತಾ? "ವಿಶ್ವಂ ದರ್ಪಣದೃಶ್ಯಮಾನನಗರೀ ತುಲ್ಯಂ..." ಅಂದರೆ, ಇಡಿಯ ಜಗತ್ತೇ ನಮಗೆ ಕನ್ನಡಿಯಲ್ಲಿ ಕಾಣುತ್ತಿರುವ ಒಂದು ಪೇಟೆ. ಅದು ಪೇಟೆಯೆಂದು ನಾವು ತಿಳಿಯುತ್ತೇವೆ; ಆದರೆ ಪೇಟೆಯ ಬಿಂಬ ಮಾತ್ರ ಅಂತ ತಿಳಿಯಲಿಕ್ಕೆ ಆತ್ಮಬೋಧೆ ಬೇಕಾಗುತ್ತದೆ. ಮತ್ತೆ ನೆನಪಿಟ್ಟುಕೊಳ್ಳಿ, ಈ ಜಗತ್ತು ಸುಳ್ಳು ಅಂತ ಶಂಕರರು ಹೇಳಲಿಲ್ಲ, ಇದು ಮಾಯೆ ಅಂದರು, ಅಷ್ಟೇ – ಈ ಕನ್ನಡಿಯಲ್ಲಿ ಕಾಣುವ ಕಾರುಗಳ ಹಾಗೆ. ಈ ಕನ್ನಡಿಕಾರುಗಳು ಸುಳ್ಳು, ಆದರೆ ಹಿಂದುಗಡೆಯಿಂದ ಅವು ಬರುತ್ತಿರುವುದು ಸುಳ್ಳಲ್ಲ! ಹಾಗಿರುವುದರಿಂದಲೇ ಇಂಥದನ್ನು ವಿವರಿಸಲಿಕ್ಕೆ ಸತ್ಯ ಮತ್ತು ಸುಳ್ಳು ಎಂಬ ಎರಡೂ ಅಲ್ಲದ, "ಮಾಯೆ" ಅನ್ನುವ ಶಬ್ದ ಶಂಕರರಿಗೆ ಬೇಕಾಯಿತು.' ಹಾಗಂದವರೆ, ಕಣ್ಣುಗಳನ್ನು ತೆರೆದು, ಮೆಲುನಗುತ್ತ ಗೋಪಾಲನ್ ಹೇಳಿದರು – 'ಪಿನ್ನೆ... ತೆಯ್ಯಮ್‌ನ ದೆಯ್ಯಗಳೂ ಹಾಗೇ, ಈ ಊರಿನ ಯಾರೂ ಅದನ್ನು ನಿಜವಾದ ದೆಯ್ಯ ಅಂತ ತಿಳಿಯುವಷ್ಟು ದಡ್ಡರಲ್ಲ. ಆದರೆ, ಅದು ಸುಳ್ಳು ಅಂತಲೂ ಅವರು ತಿಳಿಯುವುದಿಲ್ಲ... ಈ ತೆಯ್ಯಮ್ ಅನ್ನುವುದೇ ಒಂದು ಮಾಯಾದರ್ಪಣ!'

ಇಷ್ಟಾಗುವಾಗ, ನಮಗೆ ಗೋಪಾಲನ್ ಅವರ ಮಾತಿನ ಅರ್ಥ ಇಡಿಯಾಗಿ ಆಗದಿದ್ದರೂ ಅವರು ಹೇಳುತ್ತಿರುವ ತಥ್ಯ ತುಸುತುಸುವೇ ಕಾಣಲಿಕ್ಕೆ ಆರಂಭವಾಗಿತ್ತು. ನಾನು ಏನೋ ಕೇಳಬೇಕೆಂದು ಬಾಯಿ ತೆರೆದೆ;

